ಅ) 2000-01ನೇ ಸಾಲಿಗೆ ತಾಲ್ಲೂಕುವಾರು ಗುರಿಗಳನ್ನು ನೀಡಿರುವುದಿಲ್ಲ. ಆದರೆ ಕ್ಷೇತ್ರವಾರು ಗುರಿಗಳನ್ನು ನೀಡಲಾಗಿದೆ. ಕ್ಷೇತ್ರವಾರು ಗುರಿಯ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕ್ಷೇತ್ರ	ಗ್ರಾಮೀಣ	ನಗರ
1	ಚಾಮುಂಡೇಶ್ವರಿ	0	766
2	ಕೃಷ್ಣರಾಜ	440	0
3	ಹುಣಸೂರು	85	766
4	ಬನ್ನೂರು	45	766
5	ಟಿ. ನರಸೀಪುರ	25	766
6	ಚಾಮರಾಜ	440	0
7	ನಂಜನಗೂಡು	110	766
8	ಹೆಗ್ಗಡದೇವನಕೋಟೆ	20	766
9	ಪಿರಿಯಾಪಟ್ಟಣ	30	766
10	ಕೃಷ್ಣರಾಜನಗರ	65	766
11	ನರಸಿಂಹರಾಜ	440	0

ಇ) 1999-2000 ನೇ ಸಾಲಿನಲ್ಲಿ ನಗರದ ಗುರಿಗಾಗಿ ಒಟ್ಟು ರೂ. 501.50 ಲಕ್ಷಗಳನ್ನು ಮೈಸೂರು ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ.

ಕೆ.ಎಂ.ಎಫ್. ಸಂಸ್ಥೆಗೆ ಕೋರಮಂಗಲ ಪ್ರದೇಶದಲ್ಲಿ ಸರ್ಕಾರಿ ಜಮೀನು ಮಂಜೂರು

4890 - ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಂ.ಎಫ್. ಸಂಸ್ಥೆಗೆ ಕೋರಮಂಗಲ ಪ್ರದೇಶದಲ್ಲಿ ಎಷ್ಟು ವಿಸ್ತೀರ್ಣದ ಸರ್ಕಾರಿ ಜಮೀನನ್ನು ಯಾವ ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆ? (ವಿವರಗಳನ್ನು ಒದಗಿಸುವುದು)

ಆ) ಇದರ ಪೈಕಿ ಕೆ.ಎಂ.ಎಫ್.ರವರು ಇತರೇ ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗಳಿಗೆ ನೀಡಿರುವ ಪ್ರದೇಶದ ವಿಸ್ತೀರ್ಣ ಮತ್ತು ಉದ್ದೇಶಗಳ ವಿವರಗಳನ್ನು ಒದಗಿಸುವುದು?

ಇ) ಇದಕ್ಕೆ ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿದೆಯೇ?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ಸರ್ಕಾರವು ಕರ್ನಾಟಕ ಹಾಲು ಮಹಾಮಂಡಳಿಗೆ ಕಾರ್ಪೊರೇಟ್ ನಿರ್ಮಾಣಕ್ಕಾಗಿ ಕೋರಮಂಗಲ ಪ್ರದೇಶದಲ್ಲಿ 4 ಎಕರೆ 14 ಗುಂಟೆ (ನಾಲ್ಕು ಎಕರೆ ಹದಿನಾಲ್ಕು ಗುಂಟೆ) ಜಮೀನನ್ನು ಶುದ್ಧ ಕ್ರಯಕ್ಕೆ ನೀಡಿದ್ದು ಈ ಪೈಕಿ 1 ಎಕರೆ 7 ಗುಂಟೆ ಜಮೀನನ್ನು 80 ಅಡಿ ಸಾರ್ವಜನಿಕ ರಸ್ತೆ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಬಿಟ್ಟು ಕೊಡಲಾಗಿದೆ.

ಆ) ಇದರ ಪೈಕಿ ಪ್ರಾದೇಶಿಕ ಕಛೇರಿ ನಿರ್ಮಾಣಕ್ಕಾಗಿ ಗುಜರಾತ್ ಸಹಕಾರಿ ಹಾಲು ಮಾರಾಟ ಮಹಾ ಮಂಡಳಿ (ಜಿ.ಸಿ.ಎಂ.ಎಫ್.) ಇವರಿಗೆ ಗುತ್ತಿಗೆ ಆಧಾರದ ಮೇಲೆ 19.75 ಗುಂಟೆ ಜಮೀನನ್ನು ನೀಡಲಾಗಿರುತ್ತದೆ.

ಇ) ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿರುವುದಿಲ್ಲ.

ಕೊಳಚೆ ನಿರ್ಮೂಲನಾ ಮಂಡಳಿ ಕುರಿತು

4891 - ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳಚೆ ನಿರ್ಮೂಲನ ಮಂಡಳಿಯಿಂದ ಪ್ರತಿ ವಿಧಾನ ಸಭಾ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗೋಸ್ಕರ ಬಿಡುಗಡೆ ಮಾಡಿದ ಹಣ ಎಷ್ಟು? (ಕಳೆದ 5 ವರ್ಷದ ವಿವರ ನೀಡುವುದು)

ಆ) ಬಾಗಲಕೋಟೆ ಜಿಲ್ಲೆಯ ಪ್ರತಿ ತಾಲ್ಲೂಕಿಗೆ ಬಿಡುಗಡೆ ಮಾಡಿದ ಹಣ ಎಷ್ಟು?

ಇ) ಬಾಗಲಕೋಟೆ ತಾಲ್ಲೂಕಿಗೆ ಬಿಡುಗಡೆ ಮಾಡಿದ ಹಣದಲ್ಲಿ ಯಾವ ಯಾವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ? ಅವು ಈಗ ಯಾವ ಹಂತದಲ್ಲಿವೆ?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.